ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಈ ರಿಪೇರಿಗಳನ್ನು ಮುನಿಸಿಪಾಲಿಟಿಯವರೇ ಮಾಡಿಕೊಳ್ಳಬೇಕು. ಏತಕ್ಕೆಂದರೆ ಈ ಕಾರ್ಯವನ್ನು ಅವರಿಗೇ ವಹಿಸಿಕೊಟ್ಟಿದೆ. ೮ ಲಕ್ಷ ರೂಪಾಯಿನ ಮೊದಲ ಹಂತದ ಯೋಜನೆಗೆ ಸರ್ಕಾರ ಮಂಜೂರಾತಿ ನೀಡಿದೆ. ಆ ಕೆಲಸವನ್ನು ಪ್ರಾರಂಭ ಮಾಡಿಸುತ್ತೇವೆ. ರೈಸಿಂಗ್ ಮೈನ್‌ನಿಂದ ಕನೆಕ್ಷನ್ ತೆಗೆದುಕೊಂಡಿರುವುದರಿಂದ ತೊಂದರೆಯಾಗಿದೆ ಎಂದು ಹೇಳಿದ್ದಾರೆ. ಅದನ್ನು ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಕೆ. ಬಿ. ಮಲ್ಲಪ್ಪ.—ಟೆಂಡರನ್ನು ಕರೆಸಿದ್ದಾರೆಯೇ ? ಈ ಸ್ಕೀಮನ್ನು ಕಾರ್ಯಗತ ಮಾಡಲು ಎಷ್ಟು ಕಾಲ ತೆಗೆದುಕೊಳ್ಳಬಹುದು ? ಈ ವರ್ಷವೇ ಮಾಡಿಸಿಕೊಡುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಈ ವರ್ಷಕ್ಕೆ ಅಂದರೆ ೧೯೭೮-೭೯ಕ್ಕೆ ಒಂದೂವರೆ ಲಕ್ಷ ರೂಪಾಯಿಯನ್ನು ಸರ್ಕಾರ ಪ್ರೊವೈಡ್ ಮಾಡಿದೆ. ಇದಕ್ಕೆ ಅಡಿಷನಲ್ ರಿಕ್ವೈರ್‌ಮೆಂಟ್ ಇನ್ನೂ ೪ ಲಕ್ಷ ರೂಪಾಯಿ ಬೇಕಾಗುತ್ತದೆ. ಸರ್ಕಾರ ಈ ವರ್ಷ ಎಷ್ಟು ಹಣವನ್ನು ಬಿಡುಗಡೆ ಮಾಡುತ್ತದೆಂಬುದನ್ನು ನೋಡಿಕೊಂಡು ಕೆಲಸ ಪ್ರಾರಂಭ ಮಾಡಿಸುತ್ತೇವೆ.

ಶ್ರೀ ಕೆ. ಬಿ. ಮಲ್ಲಪ್ಪ.—ಕೆಲಸ ಪ್ರಾರಂಭ ಮಾಡುವುದು ಸರಿ. ಈ ವರ್ಷದ ಬೇಸಿಗೆಯೊಳಗೆ ಇದನ್ನು ಕಾರ್ಯಾರೂಪಕ್ಕೆ ತಂದು ಅಲ್ಲಿನ ಜನರಿಗೆ ಕುಡಿಯುವ ನೀರನ್ನು ಕೊಡುತ್ತೀರಾ ಎಂದು ಕೇಳುತ್ತೇನೆ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಈಗಾಗಲೇ ಕುಡಿಯುವುದಕ್ಕೆ ನೀರನ್ನು ಕೊಡುತ್ತಾ ಇದ್ದೇವೆ. ಸಾಕಷ್ಟು ಕೊಡುತ್ತಾ ಇಲ್ಲ. ಎಷ್ಟು ಜಾಗ್ರತೆ ಈ ಕಾರ್ಯಕ್ರಮವನ್ನು ಮುಂಗಿಸಬೇಕೋ ಅಷ್ಟು ಜಾಗ್ರತೆ ಮುಂಗಿಸುತ್ತೇವೆ. ಇದು ಸರ್ಕಾರ ಹಣ ಕೊಡುವುದರ ಮೇಲೆ ಅವಲಂಬಿಸಿದೆ.

(*iii*) *re; non functioning of Screening plant in Civil Hospital K. G. F.*

SRI C.M. ARMUGHAM(K.G.F.).—I call the attention of the Minister for Health and Family Welfare to the non-functioning of screening plant in the Civil Hospital, K. G. F.

SRI M. MALLAPPA (Minister for Health and family Welfare).—Sir I wish to make the following statement.—

The X-Ray Plant at K. G. F. Civil Hospital, Robertsonpet is not completely out of order. X-Ray films of patients can be taken. The screening cannot be taken due to some fault in the X-Ray table. (The X-Ray table is not tilting) There is no hardship caused for the patients attending the hospital on account of this. Action has been taken to address the firm to rectify the defect. This will be expedited.

SRI C. M. ARMUGHAM.—I am not able to understand the statement made by the Hon. Minister. What does he mean by saying that the plant is not completely out of order ? The x-ray plant is out of order for the past two months and the screening plant for the last three months. The firm is not willing to repair because its bills have not been paid. Hundreds of patients who go there are not able to get x-ray. To get immediate result, screening is better Therefore, a great hardship is caused.

SRI M. MALLAPPA.—It has been clearly stated that screening can not be done due to some faults in the x-ray table and there is no hardship caused to the patients attending the hospital, on account of this They cannot do screening work but other works can be done by the x-ray plant in that way, it is said that it is not out of order. I have no information that because the firm's bills have not been paid they are not coming forward to repair. It is the policy of the Govern ment to see that all x-ray machines are kept for use. If they are out of use, they will be rectified and if any of the plant is beyond repairs, I have issued instructions to condemn them and replace them by now ones. The hon. member has said that for the last three months this difficulty is there. I will try to set right the difficulty caused to the patients as immediately as possible.

Matter under rule 312

(i) *re : unauthorised possession of land belonging to* **M***alavalli Town Municipality* .

†ಶ್ರೀ ಕೆ. ಎಲ್. ಮುರಿಸ್ವಾಮಿ (ಮಳವಳ್ಳಿ).—ಸನ್ಮಾನ್ಯ ಸಭಾಧ್ಯಕ್ಷರೇ, ಮಳವಳ್ಳಿ ಪುರಸಭೆಗೆ ಸೇರಿದಂಥ ಪುರಸಭೆ ಜಮೀನನ್ನು ರಾಜಕೀಯ ಪ್ರಭಾವವಿರತಕ್ಕ ವ್ಯಕ್ತಿಗಳು ಯಾವರೀತಿ ಅಕ್ರಮವಾಗಿ ದುರುಪಯೋಗಪಡಿಸಿಕೊಂಡಿದ್ದಾರೆ ಎನ್ನುವುದನ್ನು ಈ ಸಭೆಯಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾಗಿದ್ದಂಥ ಶ್ರೀಮಾನ್ ಎಂ. ವಿ. ವೆಂಕಟಪ್ಪನವರು ೧೮ ವರ್ಷಗಳ ಹಿಂದೆ, ಅಂದರೆ ೧೯೬೦ನೇ ಇಸವಿಯಲ್ಲಿ ಎಕ್ಸೈಜ್ ಕಂಟ್ರಾಕ್ಟರ್ ಆಗಿದ್ದುದು ಸರಿಯಷ್ಟೆ. ಅವರು ಎಕ್ಸೈಜ್ ಕಂಟ್ರಾಕ್ಟರ್ ಆಗಿದ್ದಾಗ ಅಬ್ಕಾರಿಯನ್ನು ಕಟ್ಟಲಿಕ್ಕೆ ಆಗದೇ ಇದ್ದ ಕಾರಣದಿಂದ ಅವರ ಸರ್ವೆ ನಂಬರ್ ೫೯೫/೨ ೫೯೬ರ ೩ ಎಕರೆ ೧೪ ಗುಂಟೆ ಜಮೀನನ್ನು ಹರಾಜು ಮಾಡಿದರು. ಹರಾಜು ಮಾಡಿದಾಗ ಮುನಿಸಿಪಾಲಿಟಿಯವರು ಅದನ್ನು ೩೧೩೫ ರೂಪಾಯಿಗಳಿಗೆ ಕೊಂಡುಕೊಂಡಿದ್ದಾರೆ. ಆ ಜಮೀನನ್ನು ೨೯-೧೧-೧೯೬೦ ರಲ್ಲಿ ಡೆಪ್ಯುಟಿ ಕಮಿಷನರ್‌ರವರು ಸ್ವೀಕಸಿದ್ದಾರೆ. ಆ ಜಮೀನನ್ನು ಮುನಿಸಿಪಾಲಿಟಿ ಪೊಸಿಷನ್ನಿಗೆ ತೆಗೆದುಕೊಳ್ಳಿ ಎಂದು ೩೦-೧೧-೧೯೬೧ರಲ್ಲಿ ಡೆಪ್ಯುಟಿ ಕಮಿಷನರ್‌ರವರು ಆರ್ಡರ್ ಮಾಡಿದ್ದಾರೆ. ಆದರೆ ಮಾನ್ಯ ಎಂ. ವಿ. ವೆಂಕಟಪ್ಪನವರು ಏನು ವಿಧಾನಪರಿಷತ್ತಿನ ಸದಸ್ಯರಾಗಿದ್ದರು, ಅವರ ಅಧಿಕಾರವನ್ನು ದುರುಪಯೋಗಮಾಡಿಕೊಂಡು ಆ ಜಮೀನಿನಲ್ಲಿ ಪರ್ಮನೆಂಟ್ ಥಿಯೇಟರ್ ಕಟ್ಟಿದ್ದಾರೆ. ಅಂದರೆ ಸರ್ಕಾರದವರು ೧೮ ವರ್ಷಗಳಿಂದ ಏನು ಮಾಡುತ್ತಿದ್ದರು ಎಂದು ಕೇಳುತ್ತೇನೆ. ಆ ಜಮೀನನ್ನು ಪೊಸಿಷನ್ನಿಗೆ ತೆಗೆದುಕೊಳ್ಳದೆ ರಾಜಕೀಯ ವ್ಯಕ್ತಿಗಳಿಗೆ ಬೆಂಬಲಕೊಟ್ಟುಕೊಂಡು ಸರ್ಕಾರದವರು ಕೆಲಸ ಮಾಡುತ್ತಿದ್ದಾರೆ. ಆ ಹಣವನ್ನು ಚಲನ್ ನಂಬರ್ ೩೪/೭-೨-೧೯೬೧-೬೮-೩-೧೯೬೮ರ ಅಬ್ಕಾರಿ ಬಾಬತ್ತಿಗೆ ಕಟ್ಟಿಕೊಂಡು ಜಮೀನನ್ನು ಮುನಿಸಿಪಾಲಿಟಿಯವರು ತೆಗೆದುಕೊಳ್ಳುವುದು ಎಂದು ೧೧-೯-೧೯೭೭ರಲ್ಲಿ ಅಲ್ಲಿನ ಅಡ್ಮಿನಿಸ್ಟ್ರೇಟರಿಗೆ ಡೆಪ್ಯುಟಿ ಕಮೀಷನರ್‌ರವರು ಆದೇಶ ನೀಡಿದ್ದಾರೆ. ಆದರೆ ಮಾನ್ಯ ಎಂ. ವಿ. ವೆಂಕಟಪ್ಪನವರು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು, ಲೋಕಲ್ ಆಫೀಸರ್ಸ್‌ನ್ನು ಕೈಯ್ಯಲ್ಲಿಟ್ಟುಕೊಂಡು ಆ ಜಮೀನನ್ನು ಮುನಿಸಿಪಾಲಿಟಿಗೆ ಬಿಟ್ಟುಕೊಡದೆ ಅದರಲ್ಲಿ ಪರ್ಮನೆಂಟ್ ಥಿಯೇಟರನ್ನು ಕಟ್ಟಿಕೊಂಡಿದ್ದಾರೆ. ಅದೂ ಅಲ್ಲದೆ ಅಲ್ಲಿರತಕ್ಕ ಜಮೀನ್ನು ೯ ಎಕರೆ, ಎಲೆನೇಷನ್ ಆಗಿರತಕ್ಕದ್ದು ೨ ಎಕರೆ. ಇನ್ನು ೬ ಎಕರೆ ಜಮೀನು ಇದೆ. ಅದರ ಅಕ್ಕಪಕ್ಕದಲ್ಲಿ ಕೆರೆ ಇದೆ. ಆ ಕೆರೆಗೆ ಸೇರಿರತಕ್ಕ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಆ ಜಮೀನಿನಲ್ಲಿ ವಾಟರ್ ಪೈಪ್ಸ್ ಹೋಗಿದೆ. ಅದನ್ನೂ ಸೇರಿಸಿಕೊಂಡು ಕಾಂಪೌಂಡ್ ಹಾಕಿಕೊಂಡಿದ್ದಾರೆ. ಆದುದರಿಂದ ತಾವು ಆ ಜಮೀನನ್ನು ಮುನಿಸಿಪಾಲಿಟಿ ಪೊಸಿಷನ್ನಿಗೆ ಬಿಡಿಸಿಕೊಟ್ಟು, ಅಲ್ಲಿ ಪರ್ಮನೆಂಟ್ ಥಿಯೇಟರ್ ಏನು ಕಟ್ಟಿದ್ದಾರೆ ಅದನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ.